Construction of Bridges near Tamatadahalli in Ajjampur Hobli and across Kushi Halla near Sompura Village in Lakkavalli Hobli.

*Q.—532. Sri T. R. PARAMESWARAIAH (Tarikere).—

Will the Government be pleased to state :—

(a) whether estimates for construction of bridge near Tamatadahalli in Ajjampura Hobli and across Kushhalla near Sompura Village in Lakkai valli Hobli, were prepared long back ;

(b) if so, the reasons for the delay in taking up the works immediately ?

A.—Sri VEERENDRA PATIL (Minister for Public Works).—

(a) Yes, during 1959-60.

(b) Want of budget provision.

ಶ್ರೀ ಟಿ. ಆರ್. ಪರಮೇಶ್ವರಯ್ಯ.—ಅಜ್ಜಂಪುರದ ಹೋಬಳಿಯಲ್ಲಿರುವ ತಮಟದ ಹಳ್ಳಿಯ ಬಳಿ ಒಂದು ಸೇತುವೆ, ಮತ್ತು ಲಕ್ಕವಳ್ಳಿ ಗ್ರಾಮದ ಬಳಿ ಕುಶಿ ಹಳ್ಳಕ್ಕೆ ಅಡ್ಡಲಾಗಿ ಒಂದು ಸೇತುವೆಯನ್ನು ನಿರ್ಮಿಸುವುದಕ್ಕೋಸ್ಕರವಾಗಿ ಎಷ್ಟು ವರ್ಷಗಳಿಂದ ಆ ಪ್ರದೇಶದ ಜನಗಳು ಒತ್ತಾಯ ಮಾಡುತ್ತಿದ್ದಾರೆ ?

†ಶ್ರೀ ವೀರೇಂದ್ರಪಾಟೀಲ್.—ಅವರು ಎಷ್ಟು ವರ್ಷಗಳಿಂದ ಒತ್ತಾಯ ಮಾಡುತ್ತಿದ್ದಾರೆ ಎನ್ನುವ ವಿಷಯ ನನ್ನ ಹತ್ತಿರ ಇಲ್ಲ. 1959-60ನೇ ಸಾಲಿನಲ್ಲಿ ಅವುಗಳಿಗೆ ಎಸ್ಟಿಮೇಟ್ ತಯಾರಾಗಿದೆ.

ಶ್ರೀ ಟಿ. ಆರ್. ಪರಮೇಶ್ವರಯ್ಯ.—ಈ ಪ್ರಶ್ನೆ ಹಿಂದೆ ಒಂದು ಸಾರಿ ಈ ಸಭೆಯಲ್ಲಿ ಬಂದಿತ್ತು. ಈಗ ಎರಡನೇ ಸಾರಿ ಈ ಪ್ರಶ್ನೆ ಈ ಸಭೆಯಲ್ಲಿ ಬಂದಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ವೀರೇಂದ್ರಪಾಟೀಲ್ .— ಬಂದಿರಬಹುದು; ಆದರೆ ಅದು ನನಗೆ ಗೊತ್ತಿಲ್ಲ.

ಶ್ರೀ ಟಿ. ಆರ್. ಪರಮೇಶ್ವರಯ್ಯ.—ಈ ಕಾಮಗಾರಿಗಳನ್ನು ಬಡ್ಜೆಟ್ ಪ್ರಾವಿಜನ್‌ನಲ್ಲಿ ಸೇರಿಸಿಲ್ಲ. ಇದಕ್ಕೆ ಹಣವನ್ನು ಒದಗಿಸಿಲ್ಲ ಎಂದು ಹೇಳಿದ್ದೀರಿ ಅದನ್ನು ಬಡ್ಜೆಟ್ ಪ್ರಾವಿಜ್‌ನಲ್ಲಿ ಸೇರಿಸುವುದಕ್ಕೆ ಪ್ರಯಾರಿಟಿಬೇಸಿಸ್‌ನ್ನೇ ಅಥವಾ ಯಾವಾಧಾರವನ್ನು ಇಟ್ಟು ಕೊಂಡಿದ್ದೀರಿ?

ಶ್ರೀ ವೀ ರೇ ಂ ದ್ರ ಪಾ ಟೀ ಲ್.—ಈಗ ಅನೇಕ ಪ್ರಾಜೆಕ್ಟುಗಳು ಆಗಬೇಕಾಗಿದೆ. ದುಡ್ಡಿನ ಕೊರತೆ ಇದೆ. ಆದ್ದರಿಂದ ನಾನ್ P. W. D. ರೋಡುಗಳ ಕೆಲಸಗಳನ್ನು ತೆಗೆದುಕೊಳ್ಳಲಿಲ್ಲ.

ಶ್ರೀ ಟಿ. ಆರ್. ಪರಮೇಶ್ವರಯ್ಯ.—ನಾನ್ P. W. D. ರೋಡುಗಳ ಕೆಲಸಗಳನ್ನು ತೆಗೆದು ಕೊಳ್ಳಲಿಲ್ಲವೆಂದು ಹೇಳಿದಿರಿ. ಮಳೆಗಾಲದಲ್ಲಿ ಆ ಪ್ರದೇಶಗಳು ಐಲೆಂಡ್ ಆಗಿ ಉಳಿಯುತ್ತವೆ. ಅಲ್ಲಿ ಮಾರ್ಗ ಸೌಕರ್ಯ ಇರುವುದಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ವೀರೇಂದ್ರಪಾಟೀಲ್.—ಇರಬಹುದು.

ಶ್ರೀ ಅಂಗಡಿ ಚೆನ್ನಬಸಪ್ಪ.—ನಾನ್ P. W. D. ರೋಡುಗಳ ಕೆಲಸಗಳನ್ನು ತೆಗೆದು ಕೊಂಡಿಲ್ಲವೆಂದು ಹೇಳಿದಿರಿ, ಅವುಗಳನ್ನು ತೆಗೆದುಕೊಳ್ಳಬೇಕಾದರೆ ಸರ್ಕಾರದ ಧೋರಣೆಯೇನು ?

ಶ್ರೀ ವೀರೇಂದ್ರಪಾಟೀಲ್.—ಈ ಪ್ರಶ್ನೆ ಇದಕ್ಕೆ ಸಂಬಂಧಪಟ್ಟಹಾಗೆ ಕಾಣುಸುವುದಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದಪ್ಪ.—ಈ ಸೇತುವೆಯ ವಿಷಯದಲ್ಲಿ ಮೂರು ಸಾರಿ ಪ್ರಶ್ನೆಯನ್ನು ಕಳುಹಿಸಿದರೆಂದು ಪರಮೇಶ್ವರಯ್ಯನವರು ಹೇಳಿದರು. ಮಂತ್ರಿಗಳು ಅದಕ್ಕೆ ಹಾಗೆ ಕಳುಹಿಸಿದ್ದು ಗೊತ್ತಿಲ್ಲ ಎಂದು ಹೇಳಿದರು. ನಾನು ಹೇಳುವುದೇನೆಂದರೆ, ಒಮ್ಮೆ ಪ್ರಶ್ನೆ ಬಂದಿತ್ತು, ಅದಕ್ಕೇನು ಉತ್ತರಕೊಟ್ಟಿತ್ತು ಎಂಬುದನ್ನು ನೋಡಬೇಕೆಂಬುದೇ ಸರ್ಕಾರದಲ್ಲಿಲ್ಲವೇ ? ಅದರ ಮೇಲೆ ಏನು ಕೆಲಸವಾಯಿತು ಎಂದು ವಿಚಾರಿಸಲೇ ಬೇಡವೇ ? ಹಾಗಿಲ್ಲದೆ ಇದ್ದರೆ ನಾವು ಅಸೆಂಬ್ಲಿ ಮೆಂಬರುಗಳಾಗಿ ಪ್ರಶ್ನೆ ಹಾಕುವುದಿಂದೇನು ಪ್ರಯೋಜನ ? ನೀವು ಕೊಡುವ ಉತ್ತರದಿಂದೇನಾಗುತ್ತದೆ ?

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರು ಅಂಥಾದ್ದೇನಾದರೂ ಇದ್ದರೆ ನಮಗೆ ಬರೆಯಲಿ, ಅದಕ್ಕೆ ಉತ್ತರ ಕೊಡುತ್ತೇವೆ.

ಶ್ರೀ ಟಿ.ಆರ್. ಪರಮೇಶ್ವರಯ್ಯ.—1959 ಮತ್ತು 1960 ನೆಯ ಇಸವಿಗಳಲ್ಲಿ ನಾನು ಇದೇ ಪ್ರಶ್ನೆಯನ್ನು ಕಳುಹಿಸಿದ್ದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಹಿಂದೆ ಇಂಥ ಇಸವಿಯಲ್ಲಿ ಬಂದಿತ್ತು ಎಂದರೆ, ಅದನ್ನು ನೋಡಿ ಅದಕ್ಕೇನಾಯಿತು ಎಂದು ನೋಡಿ ಹೇಳಬೇಕೋ, ಆ ಪ್ರಶ್ನೆಯೇ ಗೊತ್ತಿಲ್ಲವೆಂದು ಹೇಳಬೇಕೋ ?

Mr. SPEAKER.—I disallow it. He is trying to lay down a procedure. That can be done on another occasion, but not during the question hour.

Sri ANGADI CHANNABASAPPA.—This is successor Government and so the Government ought to know what happened on the previous occasion and that cannot be denied by this Government.

Mr. SPEAKER.—It is a minor matter. Any more supplementaries ?

ಶ್ರೀ ಕೆ. ಲಕ್ಕಪ್ಪ.—ಹೀಗೆ ನಿಂತಿರತಕ್ಕ ಕೆಲವು ಕೆಲಸಗಳು ಆಗಬೇಕಾದರೆ ಈ ಅಸೆಂಬ್ಲಿಗೆ ಎಷ್ಟು ಸಾರಿ ಪ್ರಶ್ನೆಗಳನ್ನು ಕಳುಹಿಸಬೇಕಾಗಿದೆ ?

(*No answer*)

ಶ್ರೀ ಕೆ. ಲಕ್ಕಪ್ಪ.—ಮಂತ್ರಿಗಳು P. W. D. ಮತ್ತು non-P. W. D. ಎಂದು ಎರಡು ಬಗೆಗಳನ್ನು ಹೇಳಿದರು. ಈ ತತ್ವವನ್ನನುಸರಿಸಿದರೆ ಮಲೆನಾಡಿನಲ್ಲಿ ಬಹಳ ತೊಂದರೆ ಯಾಗುತ್ತದೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ವೀರೇಂದ್ರಪಾಟೀಲ್.—ಸೇತುವೆಯಾಗಲೀ, ಮತ್ತೊಂದಾಗಲೀ ಈಗ ಮಾಡುವುದಕ್ಕಾಗುವುದಿಲ್ಲ. ನಮ್ಮಲ್ಲಿ ದುಡ್ಡು ಬಂದಂತೆ ಕೆಲಸಕಾರ್ಯಗಳನ್ನು ತೆಗೆದುಕೊಳ್ಳುತ್ತೇವೆ.

† Indicates that the remarks or speeches have not been revised by the member concerned.

ಶ್ರೀ ಕೆ. ಲಕ್ಕಪ್ಪ.—ಈ ತತ್ವವನ್ನು ಮಲೆನಾಡಿನ ವಿಷಯದಲ್ಲಿ ಅನ್ವಯಿಸಿದೆ ಮಾಡುತ್ತೀರಾ?

ಶ್ರೀ ವೀರೇಂದ್ರಪಾಟೀಲ್.—ದುಡ್ಡಿದ್ದರೆ ಮಾಡುತ್ತೇವೆ. ಈಗಲ ಬಜೆಟ್ಟಿನಲ್ಲಿಲ್ಲ.

Sri T. R. PARAMESWARAIAH.—What is the criterion that the Minister is adopting while fixing priority for the works?

Sri VEERENDRA PATIL.—I just now said that these 2 bridges had not been included in the current year's budget and that there was no provision for them. So we are not in a position to take up these works during the current year.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಹಿಂದೆ ಎರಡು ಸಾರಿ ಪ್ರಶ್ನೆ ಕಳುಹಿಸಿದಾಗಲೂ ಆ ವರ್ಷಕ್ಕೆ ಬಜೆಟ್ ಪ್ರಾವಿಜ್ ಇಲ್ಲವೆಂದು ಹೇಳಿದ್ದರು ಇದು ಮೂರನೆಯ ಸಾರಿ ಹೇಳುತ್ತಿರುವುದು. ಇನ್ನೆಷ್ಟನೆಯ ವರ್ಷಕ್ಕೆ ಬಜೆಟ್ಟಿಗೆ ಸೇರಿಸಲು ಸರ್ಕಾರ ಅಭಿಪ್ರಾಯ ಪಟ್ಟಿದೆ?

ಶ್ರೀ ವೀರೇಂದ್ರಪಾಟೀಲ್.—ಎಷ್ಟನೆಯ ವರ್ಷ ವೆಂದು ಹೇಳುವುದಕ್ಕಾಗುವುದಿಲ್ಲ. ನಮ್ಮ financial position ನೋಡಿಕೊಂಡು ಮಾಡಬೇಕಾಗುತ್ತದೆ. ಮೊನ್ನೆ ಮೊನ್ನೆ ತಾನೆ P. W. D. ಗೆ ಒಂದನ್ನು ತೆಗೆದುಕೊಂಡಿದ್ದೇವೆ. ಇನ್ನೊಂದು P. W. D. ರಸ್ತೆಯಲ್ಲ. ಬಜೆಟ್ ಯಾವರೀತಿ ಒದಗಿಸಬಹುದು ಎಂಬುದನ್ನು ನೋಡಿ ಮಾಡಿ ಆ ಮೇಲೆ ತೆಗೆದು ಕೊಳ್ಳುತ್ತೇವೆ.

Sri T. R. PARAMESWARAIAH.—Is it not a fact that the papers are passing from the Assistant Engineer's office to the Executive Engineer's office and that they have not yet been submitted to Government?

Sri VEERENDRA PATIL.—That question does not arise. It has not been included in the Budget at all.

Sri T. R. PARAMESWARAIAH.—Is it not a fact that because the papers have not been submitted to Government, provision for them could not be made in the Budget?

Mr. SPEAKER.—The answer is that even if it has been sent to the Government, it cannot be taken up because of no provision in the Budget.

Depressed Class Agricultural Colonies started in the State since 1957.

*Q. 403. **Sri K. H. RANGANATH** (Mudigere).—

Will the Government be pleased to state :—

(*a*) the total number of Depressed Class Agricultural Colonies that were started in the State from the year 1957 to March 1962;

(*b*) the total number of families that are living and cultivating the lands in these colonies;

(*c*) the amount spent on the construction of houses in the colonies and on bullocks and agricultural implements and other facilities;

(*d*) whether the inhabitants of any of these colonies have abandoned the colonies and if so, why?

*A.—**Sri D. DEVARAJ URS** (Minister for Labour, Housing and Transport).—[On behalf of Sri G. NARAYANA GOWDA (Minister for Agriculture)].—

(*a*) No Agricultural Colonies exclusively for the Depressed Classes were started in the State during the period.

(*b*), (*c*) and (*d*) Does not arise in view of the reasons given above to clause (*a*).

Sri K. H. RANGANATH.—Is it not a fact that an agricultural colony is existing in Hiriyur Taluk at Kantanagar?

Sri D. DEVARAJ URS.—There are some agricultural colonies all over the State, but I do not know how this answer that "no agricultural colonies exclusively for the Depressed Classes were started in the State..." came to be printed.

Mr. SPEAKER.—If there is any error in the printed answer I will hold over the question.

The Minister in charge phoned me up and said that he was unwell and that the question might be held over. So if the Minister thinks that the answer is not correct I will hold over the question.

Sri D. DEVARAJ URS.—This question should have been directed to some other Department, *viz.*, the Social Welfare Department.

Mr. SPEAKER.—I want the Minister to tell me whether the printed answer is correct or not, because he himself states that agricultural colonies for Depressed Classes are there all over the State. If he is in full possesssion of all facts and can give the correct answer he may answer it otherwise I will hold over the quesion.